

-ಎಂ.ಆರ್. ದತ್ತಾತ್ರಿ
ಕಾದಂಬರಿಕಾರ ಹಾಗೂ
ಐಟಿ ಪರಿಣತ

## ‘ ನಾವು ಗೋಡೆ ದಾಟಿದ್ದೆವು, ಈಗಿನವರಿಗೆ ಬಯಲಿನಲ್ಲಿ ಗೋಡೆಯೇ ಇಲ್ಲ...

ಕುಟುಂಬದ ಚೌಕಟ್ಟಿನಿಂದ ಆಚೆ ಬರುವ ಪ್ರವೃತ್ತಿ ಅಭಿವೃದ್ಧಿ ಹೊಂದಿದ ಎಷ್ಟೋ ದೇಶಗಳಲ್ಲಿ ಇರುವುದು ನಿಜವೇ. ವ್ಯಕ್ತಿ ಮುಖ್ಯವೇ ಹೊರತು ಕುಟುಂಬ ಅಲ್ಲ ಎನ್ನುವ ಭಾವನೆಯನ್ನು ಮೊದಲ ಹಾಗೂ ಎರಡನೇ ವಿಶ್ವಯುದ್ಧಗಳ ಕಾಲದಲ್ಲಿ ಬಿತ್ತಲಾಯಿತು. 1970ರ ದಶಕದಲ್ಲಿ ಅಮೆರಿಕದಲ್ಲಿ ‘ಫೆಮಿನಿಸಂ’ ಉತ್ತುಂಗದಲ್ಲಿ ಇತ್ತು. ವಿವಾಹ ಎನ್ನುವ ಸಾಮಾಜಿಕ ಸಂಸ್ಥೆಯನ್ನು ಅದು ಪ್ರಶ್ನಿಸತೊಡಗಿತು.

ಭಾರತದಂತಹ ದೇಶದಲ್ಲಿ ಆಧ್ಯಾತ್ಮಿಕ ಅಂಶಗಳು ವ್ಯಕ್ತಿಕೇಂದ್ರಿತ ನಿಲುವನ್ನೂ ನಿಯಂತ್ರಿಸುತ್ತಾ ಇರುತ್ತವೆ. ಈಗ ಲೈಂಗಿಕತೆಯ ವಿಷಯದಲ್ಲಿ ಮಿತಿ ಎನ್ನುವುದೇ ಇಲ್ಲ. ಅಮೆರಿಕದಲ್ಲಿ ನಾನು ನೋಡಿ, ಓದಿ, ಕೇಳಿರುವಂತೆ ಸುಮಾರು ಶೇ. 90ರಷ್ಟು ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಲೈಂಗಿಕ ಅನುಭವ ಆಗಿರುತ್ತದೆ. ಸಲಿಂಗಿಗಳ ನಡುವಿನ ಲೈಂಗಿಕತೆ ದೊಡ್ಡ ಮಟ್ಟದಲ್ಲಿ ಸ್ವೀಕೃತವಾದ ಮೇಲೆ ಕ್ರಿಶ್ಚಿಯನ್ನರಲ್ಲಿಯೂ ಆಧ್ಯಾತ್ಮಿಕ ನಂಬಿಕೆ ಎನ್ನುವುದರ ನಿಯಂತ್ರಣ ಹೋಯಿತು. ಕ್ಯಾಥೊಲಿಕ್ ನಂಬಿಕೆಗಳು ಕುಟುಂಬ ವ್ಯವಸ್ಥೆಯ ಮೇಲೆ ಬೀರುತ್ತಿದ್ದ ಪ್ರಭಾವಗಳು ಇಲ್ಲವಾದವು. ಅಮೆರಿಕದಲ್ಲಿ ನಾಸ್ತಿಕವಾದವೇ ಈಗ ಹೆಚ್ಚಾಗಿದೆ. ನಮ್ಮ ದೇಶದ ಮೆಟ್ರೊ ನಗರಗಳಲ್ಲಿ ಆಗುತ್ತಿರುವುದೂ ಇದೇ. ಅಮೆರಿಕದಲ್ಲಿ ವಿವಾಹ ವಿಚ್ಛೇದನದ ಪ್ರಮಾಣ ಶೇ. 50ಕ್ಕೂ ಹೆಚ್ಚು. ಹೀಗಾಗಿ ಮಕ್ಕಳು

ಭಾವನಾತ್ಮಕ ಸಂಬಂಧದಂತಹ ಸೇವೆಯನ್ನು ಒದಗಿಸುವ ಮನಸ್ಥಿತಿ ಹೇಗಿರುತ್ತದೆನ್ನುವುದು ಕೂಡ ಇನ್ನೊಂದು ಆಯಾಮದ ಅಧ್ಯಯನಶೀಲ ವಸ್ತು.

ಜಪಾನಿನಲ್ಲಿ ‘ಹಿಕಿಕೊಮೊರಿ’ ಎನ್ನುವ ಬಹುತೇಕ ಪುರುಷರಿರುವ ಒಂದು ವರ್ಗವಿದೆ. ಅವರನ್ನು ಹಾಗೆ ಕರೆಯಲು ಮಾನಸಿಕ ಸಮಸ್ಯೆಯೊಂದರ ಕಾರಣವನ್ನು ಮನೋವಿಜ್ಞಾನಿಗಳು ನೀಡುತ್ತಾರೆ. ನಾಲ್ಕು ಗೋಡೆಗಳ ಮಧ್ಯೆಯೇ ಹೆಚ್ಚಾಗಿ ಕಳೆಯುತ್ತಾ, ತಂತ್ರಜ್ಞಾನ ಸಂಬಂಧಿ ಕೆಲಸಗಳಲ್ಲಿ ತೊಡಗಿಕೊಂಡ ಯುವಕರು ಉಳಿದ ಸಾಮಾಜಿಕ ಸಂಪರ್ಕದಿಂದ ಹೊರಗೇ ಉಳಿಯುತ್ತಾರೆ. ಮನುಷ್ಯ ಸಂಬಂಧಗಳೇ ಇಲ್ಲದಂತೆ ವರ್ಷಗಟ್ಟಲೆ ಕಳೆದಮೇಲೆ ಅವರಿಗೆ ಏಕಾಂತ ಕಾಡತೊಡಗುತ್ತದೆ. ಸರ್ಕಾರದ ಅಂದಾಜಿನ ಪ್ರಕಾರ, ಆ ದೇಶದಲ್ಲಿ ಇಂತಹ 15 ಲಕ್ಷಕ್ಕೂ ಹೆಚ್ಚು ಮಂದಿ ಇದ್ದಾರೆ. ಇಂತಹವರಲ್ಲಿ ಕೆಲವರು ಒಂಟಿತನದಿಂದ ಕೊರಗಿ ಕೊರಗಿ ಇನ್ನಷ್ಟು ವರ್ಷಗಳನ್ನು ಮಾನಸಿಕವಾಗಿ ಯಂತ್ರದಂತೆ ಆದ ಅಥವಾ ಮೃತಭಾವದಲ್ಲಿಯೇ ಕಳೆಯುತ್ತಾರೆ. ಈ ಸ್ಥಿತಿಯನ್ನು ಮನೋವಿಜ್ಞಾನಿಗಳು ‘ಕೊಡೊಕುಶಿ’ ಎಂದು ಅಲ್ಲಿ ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ ಅದನ್ನು ತರ್ಜುಮೆ ಮಾಡಿದರೆ ‘ದಿ ಲೋನ್ಲಿ ಡೆತ್’ ಎಂಬ ಅರ್ಥ ನೀಡುತ್ತದೆ.

‘ಕ್ಯಾಸ್‌ಪರ್ಸ್ಕಿ’ ಎಂಬ ಸೈಬರ್ ಸೆಕ್ಯುರಿಟಿ ಸಂಸ್ಥೆ ನಡೆಸಿದ ಸಮೀಕ್ಷೆಯ ಪ್ರಕಾರ ತಂತ್ರಜ್ಞಾನ ಹಾಗೂ ಒಂಟಿತನಕ್ಕೆ ಶೇ. 56ಕ್ಕೂ ಹೆಚ್ಚು ಮಂದಿಯಲ್ಲಿ ಸಂಬಂಧವಿದೆ. ಕೋವಿಡ್ ಸಾಂಕ್ರಾಮಿಕ ರೋಗ ಶುರುವಾಗುವ ಮೊದಲು ಇದ್ದಂತಹ ಅಂಕಿಅಂಶ ಇದು. ಈ ವರ್ಷ ಜನವರಿಯಲ್ಲಿ ಬಿಡುಗಡೆ ಮಾಡಿದ ವರದಿಯನ್ವಯ ಈ ಪ್ರತಿಶತ ಇನ್ನಷ್ಟು ಹೆಚ್ಚಾಗಿದೆ. ಜತೆಗೆ ವಿವಿಧ ವಯೋಮಾನದವರಿಗೆ ವಿಸ್ತೃತಗೊಂಡಿದೆ.

ಜಪಾನ್ ಹಾಗೂ ಅಮೆರಿಕ, ಯೂರೋಪ್‌ನ

